

ಮೈಸೂರು ರಾಜಮನೆತನದ ಕುಟುಂಬದ ಒಂದು ಅಪರೂಪದ ಚಿತ್ರ

ಎಲ್ಲರೂ ಇದ್ದರು. ಆದರೆ ಆಡಳಿತ ಇದ್ದುದು ಹೈದರಾಲಿ ಮತ್ತು ಟಿಪ್ಪು ಕೈಯಲ್ಲಿ. ಪ್ರತಿಯೊಬ್ಬರ ಕೆಂಗಣ್ಣೂ ರಾಜಮಾತೆಯ ಮೇಲೇ ಇತ್ತು. ರಾಜಮಾತೆಯೊಬ್ಬರನ್ನು ಮುಗಿಸಿದರೆ ಆಯಿತು. ಇಡೀ ರಾಜ್ಯ ನಮ್ಮ ಕೈಯಲ್ಲಿ ಎಂದೇ ಎಲ್ಲರೂ ಭಾವಿಸಿದ್ದರು. ಹೆಸರಿಗೆ ಅವರು ರಾಜಮಾತೆ. ಆದರೆ ಅವರ ವಾಸ ಕೊಟ್ಟಿಗೆಯಂತಹ ಗುಡಿಸಲಲ್ಲಿ. ಗೃಹಬಂಧನ. ಗಂಜಿಯೂಟಕ್ಕೂ ಚಿಂತೆ. ಬಾಲ ರಾಜಕುಮಾರರನ್ನು ನಿರಂತರವಾಗಿ ಸಂರಕ್ಷಿಸುವ ಸವಾಲು. ಆದರೂ ರಾಜಮಾತೆ ಬೆದರಲಿಲ್ಲ. ಮದ್ರಾಸಿನಲ್ಲಿದ್ದ ಬ್ರಿಟಿಷರನ್ನು ಸಂಪರ್ಕಿಸಿದರು. ‘ಸ್ವಾರ್ಥಿ, ವಂಚಕರಿಂದ ಮೈಸೂರನ್ನು ರಕ್ಷಿಸಿ, ಮೈಸೂರು ರಾಜ್ಯವನ್ನು ನಿಜವಾದ ಉತ್ತರಾಧಿಕಾರಿಗಳಿಗೆ ವಹಿಸಿ’ ಎಂದು ಬ್ರಿಟಿಷರಲ್ಲಿ ಮನವಿ ಮಾಡಿದರು. ಕುಲದೈವದಲ್ಲಿ ನಂಬಿಕೆ ಇಟ್ಟು ಬೆಟ್ಟದಷ್ಟು ಆಸೆಯನ್ನು ಹೊತ್ತು ಕಾದರು. ಎಂದೂ ಸಹನೆ ಕಳೆದುಕೊಳ್ಳಲಿಲ್ಲ. ತಮ್ಮ ಪ್ರಯತ್ನವನ್ನೂ ಬಿಡಲಿಲ್ಲ. ಕೊನೆಗೂ ಅವರ ನಂಬಿಕೆ ಸುಳ್ಳಾಗಲಿಲ್ಲ. ಬ್ರಿಟಿಷರ ನಡುವಿನ ಹೋರಾಟದಲ್ಲಿ ಟಿಪ್ಪು ಸುಲ್ತಾನ್ ಮಡಿದ ನಂತರ ಮೈಸೂರು ರಾಜ್ಯವನ್ನು ಮತ್ತೆ ಯದುವಂಶದ ಕುಡಿಗೆ ಹಸ್ತಾಂತರಿಸುವ ತಮ್ಮ ಕನಸನ್ನು ಅವರು ಈಡೇರಿಸಿಕೊಂಡರು.

ಕೊಟ್ಟಿಗೆಯಂತಹ ಮನೆಯಲ್ಲಿ ವಾಸವಿದ್ದರೂ ತಮ್ಮ ನಂಬಿಕಸ್ತ ಪ್ರಧಾನ ತಿರುಮಲರಾಯನ ಮೂಲಕ ಬ್ರಿಟಿಷರನ್ನು ಸಂಪರ್ಕಿಸಿ, 1782ರಲ್ಲಿ ಒಪ್ಪಂದವನ್ನು ಮಾಡಿಕೊಂಡರು. ಆ ಒಪ್ಪಂದದ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಪ್ರಬಲರಾಗಿರುವ

## ಆಧುನಿಕ ಚಿಕಿತ್ಸಾ ಪದ್ಧತಿಗೂ ಓಂಕಾರ

ಪೂರ್ಣಯ್ಯ ಅವರನ್ನು ದಿವಾನರನ್ನಾಗಿ ಮಾಡಿಕೊಂಡ ರಾಜಮಾತೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರು ಪ್ರಾಪ್ತ ವಯಸ್ಕರಾಗುವವರೆಗೂ ಮೈಸೂರು ರಾಜ್ಯವನ್ನು ಮುನ್ನಡೆಸಿದರು. ರಾಜಮಾತೆ ಲಕ್ಷ್ಮಮ್ಮಣ್ಣಿ ಸಂಪ್ರದಾಯ ಕುಟುಂಬದಿಂದ ಬಂದಿದ್ದರೂ ಆಧುನಿಕ ಮನೋಭಾವದವರಾಗಿದ್ದರು. ಸುಮಾರು 300 ವರ್ಷಗಳ ಹಿಂದೆಯೇ ಅವರು ಸಂಪ್ರದಾಯ, ಕುರುಡು ನಂಬಿಕೆಗಳ ಬಂಧನವನ್ನು ಕಿತ್ತೊಗೆದಿದ್ದರು. ವೈಜ್ಞಾನಿಕ ಪ್ರಗತಿಯ ಹೊಸತನಕ್ಕೆ ಒಗ್ಗಿಕೊಳ್ಳಲು ಯತ್ನಿಸಿದ್ದರು.

ಆಗಿನ ಕಾಲದಲ್ಲಿ ಸಿಡುಬಿನ ಮಹಾಮಾರಿ ರಾಜ್ಯದ ಮೇಲೆ ದಾಳಿ ಮಾಡಿತ್ತು. ನೂರಾರು ಜನರು ಸತ್ತಿದ್ದರು. ಆಗಲೇ ಬಂತು ವ್ಯಾಕ್ಸಿನೇಷನ್. ಆದರೆ ವ್ಯಾಕ್ಸಿನೇಷನ್ ಹಾಕಿಸಿಕೊಳ್ಳಲು ಜನರು ಸಿದ್ಧರಿರಲಿಲ್ಲ. ಸಿಡುಬಿನಿಂದ ಸತ್ತರೂ ಪರವಾಗಿಲ್ಲ. ಲಸಿಕೆ ಹಾಕಿಸಿಕೊಳ್ಳುವುದಿಲ್ಲ ಎಂದು ಪಟ್ಟು ಹಿಡಿದಿದ್ದರು. ರಾಜಮಾತೆಯವರ ದತ್ತು ಪುತ್ರನ ತಂದೆ ಕೂಡ ಸಿಡುಬಿನಿಂದ ಸತ್ತಿದ್ದರು. ಅರಮನೆಯಲ್ಲಿಯೂ ಸಿಡುಬು ಕಾಣಿಸಿಕೊಂಡಿತ್ತು. ಅದಕ್ಕಾಗಿ ರಾಜಮಾತೆ ಲಕ್ಷ್ಮಮ್ಮಣ್ಣಿ ಕಠಿಣ ನಿರ್ಧಾರವನ್ನು ಮಾಡಿ, ಅರಮನೆಯಲ್ಲಿ ಇದ್ದವರಿಗೆ ಸಿಡುಬು ಲಸಿಕೆ ಹಾಕಿಸಿದರು. ತಮ್ಮ ದತ್ತು ಪುತ್ರನ ಪತ್ನಿಗೆ ಮೊದಲ ಬಾರಿಗೆ ಲಸಿಕೆ ಹಾಕಿಸಿದರು. ಕೆಲವೇ ದಿನಗಳಲ್ಲಿ ಸಿಡುಬು ಮಾಯವಾಯಿತು. ವಿದೇಶಿ ಚಿಕಿತ್ಸಾ ಪದ್ಧತಿಗೆ ಅರಮನೆಯ ಸ್ತ್ರೀಯರು ತೋಳು ನೀಡಿದರು. ಅದು ಪ್ರಸಿದ್ಧವಾಯಿತು. ಅರಮನೆಯ ಮಹಿಳೆಯರೇ ಲಸಿಕೆ ಹಾಕಿಸಿಕೊಂಡು ಸಿಡುಬು ಗುಣಪಡಿಸಿಕೊಂಡಿದ್ದಾರೆ ಎಂಬ ನಂಬಿಕೆಯ ಮೇಲೆ ಪ್ರಜೆಗಳೂ ಲಸಿಕೆ ಹಾಕಿಸಿಕೊಳ್ಳಲು ಮುಂದಾದರು.

ವಾಣಿ ವಿಲಾಸ ಅವರೂ ಕೂಡ ಆಧುನಿಕ ಚಿಕಿತ್ಸೆಗೆ ಅಸ್ತಿಭಾರ ಹಾಕಿದವರು. 1903ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಹೋದರಿ ರಾಜಕುಮಾರಿ ಕೃಷ್ಣಾಜಮ್ಮಣ್ಣಿ ತಮ್ಮ 21ನೇ ವಯಸ್ಸಿನಲ್ಲಿ ಕ್ಷಯ ರೋಗದಿಂದ ಮೃತರಾದರು. 1910ರಲ್ಲಿ ಅವರ ಪುತ್ರಿ ತ್ರಿಪುರ ಸುಂದರಿ ಚಲುವಾಜಮ್ಮಣ್ಣಿ, 1913ರಲ್ಲಿ ಇನ್ನಿಬ್ಬರು ರಾಜಕುಮಾರಿಯರಾದ ಕೆಂಪನಂಜಮ್ಮಣ್ಣಿ, ದೇವಾಜಮ್ಮಣ್ಣಿ ಕ್ಷಯ ರೋಗಕ್ಕೆ ತುತ್ತಾದರು. ಇದು ರಾಜಮಾತೆ ವಾಣಿವಿಲಾಸ ಅವರನ್ನು ಧೃತಿಗೆಡಿಸಿತು. ಅದಕ್ಕೇ ಅವರು ಕ್ಷಯ ರೋಗ ನಿವಾರಣೆಗಾಗಿ ಆಸ್ಪತ್ರೆಯೊಂದನ್ನು ನಿರ್ಮಿಸಿದರು. ಇಂತಹ ಆಸ್ಪತ್ರೆ ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಮೈಸೂರಿನಲ್ಲಿ ಆರಂಭವಾಯಿತು.